Electricity (New rates structure).

Q.—719. Sri P. R. RAMAIYA (Basavangudi).—

Will the Government be pleased to state :—

(*a*) whether any representations have been made to Government by power consumers in Bangalore that the new rate structure is very high and that it should be reduced ;

(*b*) the action taken by Government in this matter ?

A.—Sri H. M. CHANNABASAPPA (Minister for Revenue and Agriculture).—

(*a*) Yes.

(*b*) Certain modifications have been effected in the original order (*vide* copies of Press Notes dated 20th April 1956 and 7th August 1956 placed on the Table of the House).

ಶ್ರೀ ಪಿ. ಆರ್. ರಾಮಯ್ಯ.—ತಾವು 1956ನೇ ಆಗಸ್ಟ್ 7ನೆಯ ತಾರೀಖಿನಲ್ಲಿ ಮಾಡಿರತಕ್ಕ ಆರ್ಡರನ್ನು ಪುನಃ ವಿಮರ್ಶೆ ಮಾಡಿ ಜನರಿಗೆ ಅನುಕೂಲಪಡಿಸಿ ಕೊಡಬೇಕೆಂದು ತಮಗೆ ಮನವಿಗಳೇನಾದರೂ ಬಂದಿರುತ್ತವೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರದಲ್ಲೇ ತಿಳಿಸಿದ್ದೇನೆ. ಮನವಿಗಳು ಬಂದಿವೆ. ಇನ್ನೂ ಬರುತ್ತಲೇ ಇವೆ.

ಶ್ರೀ ಪಿ. ಆರ್. ರಾಮಯ್ಯ.—ತಮ್ಮ ಆರ್ಡರಿನಲ್ಲಿ ಈ ರಿಯಾಯಿತಿ ದರಗಳನ್ನು ನವೆಂಬರ್ ತಿಂಗಳವರೆಗೆ ಮಾತ್ರ ಕೊಡಲಾಗುತ್ತದೆಂದು ಹೇಳಿದ್ದೀರಿ. ಈ ರಿಯಾಯಿತಿ ದರಗಳನ್ನು ಮಾರ್ಚ್—ಏಪ್ರಿಲ್ ತಿಂಗಳಾಖ್ಯೆರವರೆಗೂ ಮುಂದುವರಿಸಿಕೊಡಬೇಕೆಂದು ಮನವಿಗಳು ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿವೆ.

ಶ್ರೀ ಪಿ. ಆರ್. ರಾಮಯ್ಯ.—ಆ ವಿಚಾರವಾಗಿ ಸರ್ಕಾರದವರೇನು ತೀರ್ಮಾನ ಕ್ಕೆಗೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆಯ ದಿವಸ ತಾನೆ ಆ ವಿಚಾರದಲ್ಲಿ ಯೋಗ್ಯತಾಯೋಗ್ಯತೆಗಳ ಮೇಲೆ ಪರಿಶೀಲನೆ ಮಾಡುತ್ತಿದ್ದೇವೆಂದು ಉತ್ತರ ಹೇಳಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಈ ವಿಚಾರದಲ್ಲಿ ಮುಂದಿನ ತಿಂಗಳಾಖ್ಯೆರಿನೊಳಗಾಗಾದರೂ ಆರ್ಡರ್ ಹೊರಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ನಾನು ಹೇಳಿಲ್ಲ. ಯೋಗ್ಯತಾಯೋಗ್ಯತೆಗಳನ್ನ ವಿಮರ್ಶೆ ಮಾಡಿ ನೋಡುತ್ತೇನೆಂದು ಮಾತ್ರ ತಿಳಿಸಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲನೆ ಮಾಡುತ್ತೇವೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಕೆ. ಪ್ರಭಾಕರ್.—ವಿದ್ಯುಚ್ಛಕ್ತಿ ದರಗಳನ್ನು ಜಾಸ್ತಿ ಮಾಡಿದ್ದರಿಂದ ಯಾವ ಯಾವ ಗುಂಪಿನ ಜನಗಳಿಗೆ ಬಹಳ ಕಷ್ಟವಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರ್ಯಾರಿಗೆ ಕಷ್ಟವಾಗಿದೆಯೋ ಅವರೆಲ್ಲ ಅರ್ಜಿ ಹಾಕಿದ್ದಾರೆಂದು ಭಾವನೆ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ್.—ಪ್ಲೋರ್ ಮಿಲ್‌ಗಳವರು ಬಹಳ ಕಷ್ಟಪಡುತ್ತಿದ್ದಾರೆಂದು ಅನೇಕ ಸಲ ಸರ್ಕಾರಕ್ಕೆ ಮನವಿಗಳನ್ನು ಕೊಟ್ಟಿದ್ದಾಗ್ಗೂ ಸರ್ಕಾರದವರು ಅವುಗಳನ್ನು ಪರಿಶೀಲನೆ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲನೆ ಮಾಡಿ ಆಗಸ್ಟ್ ತಿಂಗಳಿನಲ್ಲಿ ಒಂದು ಆಜ್ಞೆಯನ್ನು ಹೊರಡಿಸಲಾಯಿತು.

Mr. SPEAKER.—These questions have been answered.

Binny Mill Tank (Breaching).

Q.—750. Sri R. ANANTARAMAN (Chamarajpet).—

Will the Government be pleased to state :—

(*a*) whether a decision was taken by Government to breach the Binny Mill tank;

(*b*) if so, what further action they have taken ?

A.—Sri H. M. CHANNABASAPPA (Minister for Revenue and Agriculture).—

(*a*) Yes.

(*b*) The matter is under further examination with reference to the cost involved.

Sri R. ANANTARAMAN.—May I know when you took the dicision to breach the tank ?

*Sri H. M. CHANNABASAPPA.—The decision to breach the tank was taken recently and the Government order is dated 16th July 1956.

Sri R. ANANTARAMAN.—Since how long it has been pending, Sir ?